
## ಸವಾಲ್ ಜಬಾಬ್!



ನನ್ನ ಮೊಮ್ಮಗಳು ಎರಡೂವರೆ ವರ್ಷದ ವೇದಾಂಶಿ ಹಾಗೂ ಏಳು ವರ್ಷದ ಮೊಮ್ಮಗ ವೇದಾಂತ ಇಬ್ಬರ ಮಧ್ಯೆ ಮಾತಿನ ಚಕಮಕಿ ನಡೆಯುತ್ತಲೇ ಇರುತ್ತದೆ. ಒಮ್ಮೆ ಇಬ್ಬರಲ್ಲೂ ಮಾತಿಗೆ ಮಾತು ಬೆಳೆಯಿತು. ವೇದಾಂತ ಆಕೆಯನ್ನು 'ಕತ್ತೆ' ಎಂದ. ವೇದಾಂಶಿ 'ನೀನೇ ಕತ್ತೆ' ಎಂದಳು. 'ನೀನು ಬೆಕ್ಕು' ಎಂದ.'ನೀನೇ ಬೆಕ್ಕು' ಎಂದಳು. 'ನೀನು ಕೋಳಿ', 'ನೀನೇ ಕೋಳಿ', 'ನೀನು ಕಾಗೆ', 'ನೀನೇ ಕಾಗೆ...' ಕೊನೆಗೆ ಜಗಳ ಮುಗಿಸಲು ವೇದಾಂತ 'ನೀನು ಚೆಂದ' ಎಂದ. 'ಹೌದು' ವೇದಾಂಶಿಯಿಂದ ಥಟ್ ಎಂದು ಉತ್ತರ ಬಂದಾಗ ವೇದಾಂತ ಪೆಚ್ಚು ಮೋರೆ ಹಾಕಿಕೊಂಡ. ಇದನ್ನು ದೂರದಿಂದ ನೋಡುತ್ತಿದ್ದ ನನಗೆ ನಗು ತಡಯಲಾಗಲಿಲ್ಲ.

**ರಾಜಲಕ್ಷ್ಮೀ ವಿ. ಶೆಣೈ**

## ನಿಮ್ಮ ಹಾಗೇ ಆಗ್ಬೇಕು

ನನ್ನದು ಸ್ವಲ್ಪ ಸ್ಥೂಲಕಾಯ. ಹೇಗಾದರೂ ಮಾಡಿ ತೂಕ ಇಳಿಸಿಕೊಳ್ಳಬೇಕೆಂದು ನನ್ನ ಸ್ನೇಹಿತರು, ಹಿತೈಷಿಗಳು ಹೇಳುವ ಬಿಟ್ಟಿ ಸಲಹೆಗಳನ್ನೆಲ್ಲಾ ಪಾಲಿಸುತ್ತಾ ನಾನಾ ಕಸರತ್ತುಗಳನ್ನು ನಡೆಸುತ್ತಲೇ ಇರುತ್ತೇನೆ. ನಿರೀಕ್ಷಿತ ಫಲಿತಾಂಶ ಸಿಕ್ಕಿಲ್ಲವಾದರೂ ಹಾಗಂತ ನನ್ನ ಉತ್ಸಾಹ ಮಾತ್ರ ಕುಗ್ಗಿಲ್ಲ. ಕಳೆದ ತಿಂಗಳು ನನ್ನ ಆಪ್ತ ಗೆಳತಿಯ ಸಲಹೆಯಂತೆ ಮನೆಗೆ 'ಥ್ರೆಡ್ ಮಿಲ್' ತಂದು ಬೆಳಗು, ಸಂಜೆ ಅದರ ಮೇಲೆ ವ್ಯಾಯಾಮ ನಡೆಸಿದ್ದೆ. ನಮ್ಮ ಕೆಳಗಡೆ ಮನೆಯಲ್ಲಿ ವಾಸವಾಗಿರುವ ಪುಟ್ಟ ಲಲ್ಲೂ ನನ್ನ ಈ ಚಟುವಟಿಕೆಯನ್ನು ಕುತೂಹಲದಿಂದ ಗಮನಿಸುತ್ತಲೇ ಇದ್ದಳು. ಒಂದು ದಿನ ಬೆಳಿಗ್ಗೆ ನಾನು 'ಥ್ರೆಡ್ ಮಿಲ್' ಮೇಲೆ ವಾಕಿಂಗ್ ಮಾಡ್ತಿದ್ದಾಗ ಅಲ್ಲಿಗೆ ಬಂದವಳೇ, 'ಆಂಟೀ ನಾನು ಇದರ ಮೇಲೆ ವಾಕಿಂಗ್ ಮಾಡಿದ್ರೆ ನಿಮ್ಮ ಹಾಗೇ ದಪ್ಪ ಆಗ್ತೀನಾ?' ಎಂದು ಕುತೂಹಲದಿಂದ ಕೇಳಿದಾಗ ನಮ್ಮ ಯಜಮಾನರು ಮುಸಿಮುಸಿ ನಕ್ಕರು.





**ಶಾಂತಾ ನರಸಿಂಹ ಮೂರ್ತಿ**